ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ಸಂಖ್ಯೆ: ಕವಿಪ್ರನಿನಿ/ಬಿ16/7990/2009-10** **ದಿನಾಂಕ:** 24 APR 2019

## ಸುತ್ತೋಲೆ

ವಿಷಯ: ನಿಗಮದ ಅಂಧ/ಅಂಗವಿಕಲ ಅಧಿಕಾರಿ/ನೌಕರರಿಗೆ ವಾಹನ ಭತ್ಯೆಯನ್ನು ಮಂಜೂರು ಮಾಡುವಾಗ 'ಡಿಯರ್‌ನೆಸ್ ಪೇ' ಅನ್ನು ಮೂಲ ವೇತನದ ಭಾಗವೆಂದು ಪರಿಗಣಿಸುವ ಕುರಿತು.

ಉಲ್ಲೇಖ:
1. ಪಾಳಿ ಭತ್ಯೆ, ದ್ವಿಗುಣ ವೇತನ ಮತ್ತು ಪ್ರಭಾರ ಭತ್ಯೆಗಳನ್ನು ಮಂಜೂರು ಮಾಡುವಾಗ 'ಡಿಯರ್‌ನೆಸ್ ಪೇ' ಅನ್ನು ಮೂಲ ವೇತನದ ಭಾಗವೆಂದು ಪರಿಗಣಿಸಿ ಹೊರಡಿಸಲಾದ ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/7990/2009-10, ದಿನಾಂಕ: 27.01.2010 ಮತ್ತು 18.10.2010.
2. ತುಟ್ಟಿ ಭತ್ಯೆ, ಪಿಂಚಣಿ ಸವಲತ್ತು, ಮನೆ ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಗಳನ್ನು ಮಂಜೂರು ಮಾಡುವಾಗ 'ಡಿಯರ್‌ನೆಸ್ ಪೇ' ಅನ್ನು ಮೂಲ ವೇತನದ ಭಾಗವೆಂದು ಪರಿಗಣಿಸಿ ಹೊರಡಿಸಲಾದ ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3610/2003-04, ದಿನಾಂಕ: 22.06.2012.
3. ದಿನಾಂಕ: 01.07.2017 ರಿಂದ ಅನ್ವಯವಾಗುವಂತೆ ಮಂಜೂರು ಮಾಡಲಾಗಿರುವ ಶೇಕಡ 45.25 ರಷ್ಟು ತುಟ್ಟಿಭತ್ಯೆಯನ್ನು 'ಡಿಯರ್‌ನೆಸ್ ಪೇ' ಎಂದು ಪರಿಗಣಿಸಿ ಹೊರಡಿಸಲಾದ ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3610/2003-04 ದಿನಾಂಕ: 21.06.2018.
4. ನಿಗಮದ ಟಿಪ್ಪಣಿ ದಿನಾಂಕ: 12.04.2019.

*****

ತುಟ್ಟಿ ಭತ್ಯೆ, ಪಿಂಚಣಿ ಸವಲತ್ತು, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ಪಾಳಿ ಭತ್ಯೆ, ದ್ವಿಗುಣ ವೇತನ ಮತ್ತು ಪ್ರಭಾರ ಭತ್ಯೆಗಳನ್ನು ಮಂಜೂರು ಮಾಡುವಾಗ 'ಡಿಯರ್‌ನೆಸ್ ಪೇ' ಅನ್ನು ಮೂಲ ವೇತನದ ಭಾಗವೆಂದು ಪರಿಗಣಿಸುವಂತೆ ನಿಗಮದ ದಿನಾಂಕ: 27.01.2010. 18.10.2010 ಮತ್ತು 22.06.2012 ರ ಆದೇಶಗಳಲ್ಲಿ ತಿಳಿಸಲಾಗಿರುತ್ತದೆ.

ರಾಜ್ಯ ಸರ್ಕಾರದ ದಿನಾಂಕ: 16.02.2013 ರ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012(X) ನ್ನು ನಿಗಮದಲ್ಲಿ ಅಳವಡಿಸಿಕೊಂಡು, ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಧ ಮತ್ತು ಅಂಗವಿಕಲ ನೌಕರರಿಗೆ ಪಾವತಿ ಮಾಡುತ್ತಿರುವ ವಾಹನ ಭತ್ಯೆ ದರವನ್ನು ಮೂಲ ವೇತನದ ಶೇಕಡ 6 ರಂತೆ ಮಾಸಿಕ ಯಾವುದೇ ಗರಿಷ್ಠ ಮಿತಿಯಿಲ್ಲದೇ ಪಾವತಿಸಲು ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/3595/98-99, ದಿನಾಂಕ: 26.02.2013 ರಲ್ಲಿ ಅನುಮೋದನೆಯನ್ನು ನೀಡಲಾಗಿದೆ.

ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ಅಂಗವಿಕಲ ನೌಕರರು ತಮಗೆ ವಾಹನ ಭತ್ಯೆ ಪಾವತಿ ಮಾಡುವಾಗ 'ಡಿಯರ್‌ನೆಸ್ ಪೇ' ಅನ್ನು ಪರಿಗಣಿಸದೇ ಕೇವಲ ಮೂಲ ವೇತನವನ್ನು ಮಾತ್ರ ಪರಿಗಣಿಸುತ್ತಿದ್ದು, 'ಡಿಯರ್‌ನೆಸ್ ಪೇ' ಅನ್ನು ಸಹ ಮೂಲ ವೇತನದ ಭಾಗವೆಂದು ಪರಿಗಣಿಸುವಂತೆ ಕೋರಿರುತ್ತಾರೆ.

ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ನಿಗಮದಲ್ಲಿ 'ಡಿಯರ್‌ನೆಸ್ ಪೇ' ಅನ್ನು ಪಿಂಚಣಿ ಸವಲತ್ತು, ತುಟ್ಟಿ ಭತ್ಯೆ, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ಪಾಳಿ ಭತ್ಯೆ, ದ್ವಿಗುಣ ವೇತನ ಮತ್ತು ಪ್ರಭಾರ ಭತ್ಯೆಗಳ ಲೆಕ್ಕಾಚಾರಕ್ಕೆ ಪರಿಗಣಿಸಲಾಗುತ್ತಿದೆ. ಈ ಹಿನ್ನಲೆಯಲ್ಲಿ, ವಾಹನ ಭತ್ಯೆಯ ಲೆಕ್ಕಾಚಾರಕ್ಕೂ ಸಹ 'ಡಿಯರ್‌ನೆಸ್ ಪೇ' ಅನ್ನು ಮೂಲವೇತನದ ಭಾಗವೆಂದು ಪರಿಗಣಿಸಲು ಈ ಕೆಳಗಿನಂತೆ ಸೂಚಿಸಿದೆ:-

1. ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಧ ಮತ್ತು ಅಂಗವಿಕಲ ನೌಕರರಿಗೆ ವಾಹನ ಭತ್ಯೆಯ ಲೆಕ್ಕಾಚಾರಕ್ಕೆ 'ಡಿಯರ್‌ನೆಸ್ ಪೇ' ಅನ್ನು ಸಹ ಮೂಲ ವೇತನದ ಭಾಗವೆಂದು ಪರಿಗಣಿಸುವುದು. ಆರ್ಥಿಕ ಸೌಲಭ್ಯವನ್ನು, **ದಿನಾಂಕ: 01.04.2019** ರಿಂದ ವಿಸ್ತರಿಸುವುದು.

2. ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಧ ಹಾಗೂ ಅಂಗವಿಕಲ ಅಧಿಕಾರಿಗಳಿಗೆ ನಿಗಮದ ವಾಹನವನ್ನು ಒದಗಿಸಿದ್ದಲ್ಲಿ ಅಥವಾ ನಿಗಮದ ವತಿಯಿಂದ ಬಾಡಿಗೆ ವಾಹನ ಸೌಲಭ್ಯವನ್ನು ಒದಗಿಸಿದ್ದಲ್ಲಿ, ಇವರಿಗೆ ಮೂಲ ವೇತನದ ಮೇಲೆ **ಶೇಕಡ 6 ರಷ್ಟು** ವಾಹನ ಭತ್ಯೆ ಪಾವತಿಗೆ ಅವಕಾಶವಿರುವುದಿಲ್ಲ.

3. ಕವಿಪ್ರನಿನಿ ನಿಗಮ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗವಿಕಲ ಅಧಿಕಾರಿಗಳಿಗೆ ವಾಹನ ಇಂಧನ ಹಾಗೂ ನಿರ್ವಹಣಾ ವೆಚ್ಚದ ಮರುಪಾವತಿ ಮಾಡುತ್ತಿದ್ದಲ್ಲಿ, ಇವರುಗಳಿಗೆ ಮೂಲ ವೇತನದ ಮೇಲೆ **ಶೇಕಡ 6 ರಷ್ಟು** ವಾಹನ ಭತ್ಯೆ ಪಾವತಿಗೆ ಅವಕಾಶವಿರುವುದಿಲ್ಲ.

Gopalk
ನಿರ್ದೇಶಕರು
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

ಗೆ:

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.
   www.kptcl.com/eprasarana for information of:
6. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿಭವನ, ಬೆಂಗಳೂರು.